

ಸಿಂಧು ಲೋಕನಾಥ್

27ನೇ ಪುಟದಿಂದ

# ನಾಯಕಿಯರಿಗೆ ಮಂಕು!

ಹಿರಿಯ ನಟಿ ಮಾಲಾಶ್ರೀ ಅವರ ಎರಡು ಚಿತ್ರಗಳು (‘ವೀರ’, ‘ಎಲೆಕ್ಷನ್’) ತೆರೆ ಕಂಡ ಮತ್ತು ತಾರಾ ವರ್ಚಸ್ಸಿನ ನಟಿ ರಮ್ಯಾ ಬೆಳ್ಳಿತೆರೆಯಿಂದ ರಾಜಕಾರಣದ ಮೊಗಸಾಲೆಗೆ ತೆರಳಿದ 2013 ಕನ್ನಡದ ನಟಿಯರ ಪಾಲಿಗೆ ಸ್ಮರಣೀಯ ವರ್ಷವೇನಲ್ಲ. ಕಳೆದ ಮೂರ್ನಾಲ್ಕು ವರ್ಷಗಳಿಂದ ಕನ್ನಡದ ಮುಂಚೂಣಿ ತಾರೆಯಾಗಿದ್ದ ರಾಧಿಕಾ ಪಂಡಿತ್‌ರ ಎರಡು ಸಿನಿಮಾಗಳು (‘ಕಡ್ಡಿಪುಡಿ’ ಹಾಗೂ ‘ದಿಲ್‌ವಾಲಾ’) ತೆರೆ ಕಂಡವು. ನಟನೆಯ ಮಟ್ಟಿಗೆ ರಾಧಿಕಾ ಎಂದಿನಂತೆ ಮೆಚ್ಚುಗೆ ಗಳಿಸಿದರೂ ಸದ್ಯಕ್ಕೆ ಅವರ ಕೈಯಲ್ಲಿ ಸವಾಲಿನ ಚಿತ್ರಗಳು ಇದ್ದಂತಿಲ್ಲ. ‘ಸ್ವೀಟಿ’ ಮೂಲಕ ಮತ್ತೊಬ್ಬ ರಾಧಿಕಾ ಅಭಿನಯಕ್ಕೆ ಮರಳಿದ ವರ್ಷವಿದು. ಆದರೆ, ವಿಜಯಲಕ್ಷ್ಮಿ ಸಿಂಗ್ ನಿರ್ದೇಶನದ ‘ಸ್ವೀಟಿ’ ರಾಧಿಕಾಗೆ ಸಿಹಿಯೆನ್ನಿಸಲಿಲ್ಲ. ಮತ್ತೊಬ್ಬ ನಟಿ ಐಂದ್ರಿತಾ ರೇ ‘ಕಡ್ಡಿಪುಡಿ’ಯ ‘ಸೌಂದರ್ಯ ಸಮರ’ ಹಾಡಿನಲ್ಲಿ ಕುಣಿದರು. ‘ಟೋನಿ’ ಹಾಗೂ ‘ಭಜರಂಗಿ’ ಚಿತ್ರಗಳಲ್ಲಿ ನಾಯಕಿಯಾಗಿ ನಟಿಸಿದರೂ ಐಂದ್ರಿತಾ ಬೇಡಿಕೆಯ ತಾರೆಯಾಗಿ ಚಾಲ್ತಿಯಲ್ಲಿಲ್ಲ. ಕಳೆದ ವರ್ಷ ಬೇಡಿಕೆಯಲ್ಲಿದ್ದ ರಾಗಿಣಿ 2013ರಲ್ಲಿ ಠುಸ್ ಪಟಾಕಿ.

ಹೊಸ ಹುಡುಗಿಯರ ಪೈಕಿ ಹೆಚ್ಚು ಗಮನಸೆಳೆದ ಚೆಲುವೆ ಸಿಂಧು ಲೋಕನಾಥ್. ‘ಕೇಸ್ ನಂ. 18/9’, ‘ಸ್ಯಾಂಡಲ್‌ವುಡ್ ಸರಿಗಮ’ ಹಾಗೂ ‘ಕಾಫಿ ವಿತ್ ಮೈ ವೈಫ್’ ಚಿತ್ರಗಳಲ್ಲಿ ಅವರದು ಲವಲವಿಕೆಯ ನಟನೆ.

ಪ್ರಣೀತಾ, ಕೃತಿ ಕರಬಂಧ, ಶ್ರುತಿ ಹರಿಹರನ್, ಭಾಮಾ, ಭಾವನಾ, ರಚಿತಾ ರಾಮ್, ದೀಪಾ ಸನ್ನಿಧಿ, ಹರ್ಷಿಕಾ ಪೂಣಚ್ಚ, ಸಂಜನಾ ಅವರು ಕೆಲವು ಚಿತ್ರಗಳಲ್ಲಿ ಗಮನಸೆಳೆದರಾದರೂ ಬೇಡಿಕೆಯ ನಟಿಯರಾಗಿ ಅವರು ಗುರ್ತಿಸಿಕೊಂಡಿಲ್ಲ.

# ಹಾಸ್ಯೋತ್ಸವ

ಹಾಸ್ಯ ಚಿತ್ರಗಳು ದೊಡ್ಡ ಪ್ರಮಾಣದಲ್ಲಿ ತೆರೆ ಕಂಡಿದ್ದು 2013ರ ವಿಶೇಷಗಳಲ್ಲೊಂದು. ‘ದೇವ್ರಾಣೆ’, ‘ಅಕ್ಕಪಕ್ಕ’, ‘ಪರಾರಿ’, ‘ಛತ್ರಿಗಳು ಸಾರ್ ಛತ್ರಿಗಳು’, ‘ಆನೆಪಟಾಕಿ’, ‘ರಾಧನ್ ಗಂಡ’, ‘ವಿಕ್ಟರಿ’, ‘ಪ್ಯಾರ್‌ಗೆ ಆಗ್ಬಿಟ್ಟೈತೆ’, ‘ದಾಸ್ವಾಳ’, ‘ಚಡ್ಡಿದೋಸ್ತ್’, ‘ಕೂಲ್ ಗಣೇಶ’– ಹೀಗೆ, ಹಾಸ್ಯವನ್ನೇ ಬಂಡವಾಳ ಆಗಿಸಿಕೊಂಡ ಸಾಕಷ್ಟು ಸಿನಿಮಾಗಳು ತೆರೆಕಂಡರೂ ಯಶಸ್ಸು ಗಳಿಸಿದ್ದು ‘ವಿಕ್ಟರಿ’ ಮಾತ್ರ. ಅಡಲ್ಟ್ ಕಾಮಿಡಿ ಹೊಂದಿದ್ದ ಕೆ.ಎಂ. ಚೈತನ್ಯ ಅವರ ‘ಪರಾರಿ’ ಸಿನಿಮಾ ಒಂದು ಪ್ರಯೋಗವಾಗಿ ಗಮನಸೆಳೆದದ್ದನ್ನು ಹೊರತುಪಡಿಸಿದರೆ, ಉಳಿದ ಸಿನಿಮಾಗಳೆಲ್ಲ ಹಳಸಲು ಶಬ್ದಪ್ರಸಂಗಗಳೇ ಆಗಿದ್ದವು.

‘ಮನಿ ಹನಿ ಶನಿ’ (ನಿ: ರಾಜೇಶ್ ಮೂರ್ತಿ), ‘ಲೂಸ್‌ಗಳು’ (ನಿ: ಅರುಣ್) ಹಾಗೂ ‘ಮಂಗನ ಕೈಲಿ ಮಾಣಿಕ್ಯ’ (ನಿ: ರಾಜೇಂದ್ರ ಕಾರಂತ್) ಚಿತ್ರಗಳನ್ನೂ ಹಾಸ್ಯಚಿತ್ರಗಳ ಪಟ್ಟಿಯಲ್ಲೇ ಗುರ್ತಿಸಬೇಕು. ಹೊಸ ನಿರ್ದೇಶಕರ ಈ ಚಿತ್ರಗಳು ಯುವ ಪ್ರತಿಭೆಗಳ ಪರಿಚಯ, ಸಿನಿಮಾ ಕಟ್ಟುವಿಕೆಯ ಕಸುಬುದಾರಿಕೆ ಸೇರಿದಂತೆ ವಿವಿಧ ಕಾರಣಗಳಿಂದಾಗಿ ಗಮನಸೆಳೆದರೂ ಗೆಲುವು ಕಾಣುವಲ್ಲಿ ವಿಫಲವಾದವು. ■



ಶರಣ್